**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ.22195/2022** **ಪ್ರಾ.ಸಾ –5**
**ಚಾ.ಸಾ –5**

**ದಿನಾಂಕ: 30.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಲೋಕೇಶ್ |
| ತಂದೆ ಹೆಸರು | : | ಶಿವಣ್ಣ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಬಸವನಹಳ್ಳಿ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ದಿನಾಂಕಃ 06.10.2022 ರಂದು ಚಾಸಾ-8 ರವರು ಚಾಸಾ-1 ರವರ ಮನೆಯ ಬಳಿ ಪಂಚನಾಮೆ ಮಾಡಲು ಬಂದಿದ್ದರು. ಅವರು ನನ್ನನ್ನು ಪಂಚರಾಗಿ ಬರಲು ಕರೆದಿರುತ್ತಾರೆ. ನನ್ನ ಸಮಕ್ಷಮದಲ್ಲಿ ನನ್ನ ಮತ್ತು ಚಾಸಾ-6 ರವರ ಸಮಕ್ಷಮ ಚಾಸಾ-4 ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 11-00 ಗಂಟೆಯಿಂದ 11-30 ಗಂಟೆಯವರೆಗೆ ಪಂಚನಾಮೆ ಕ್ರಮವನ್ನು ಜರುಗಿಸಿರುತ್ತಾರೆ. ಸ್ಥಳದಲ್ಲಿ ಪಂಚನಾಮೆಯನ್ನು ತಯಾರಿಸಿ ನಮ್ಮ ಸಹಿಯನ್ನು ಪಡೆದಿರುತ್ತಾರೆ. ಚಾಸಾ-4 ರವರು ಕೊಟ್ಟ ಕಲ್ಲನ್ನು ಚಾಸಾ-8 ರವರು ಜಪ್ತುಪಡಿಸಿಕೊಂಡಿರುತ್ತಾರೆ. ಪಂಚನಾಮೆ ಸ್ಥಳದ ಪೂರ್ವಕ್ಕೆ - ಚಾಸಾ-1 ರವರ ಮನೆ, ಪಶ್ಚಿಮಕ್ಕೆ - ರಸ್ತೆ ನಂತರ ಶಿವಾನಂದಪ್ಪನ ಕಾಯಿ ಶೆಡ್, ಉತ್ತರಕ್ಕೆ - ಖಾಲಿ ನಿವೇಶನ, ದಕ್ಷಿಣಕ್ಕೆ - ಆರೋಪಿತರ ವಾಸದ ಮನೆ ಬರುತ್ತದೆ. ಸಾಕ್ಷಿಯು ನಿಪಿ-2 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ನೊಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುಮಾ-1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿತರ ಪರ ಶ್ರೀ.H.L ವಕೀಲರಿಂದ :-**

ನಾನು ನನ್ನ ತೋಟಕ್ಕೆ ಹೋಗಬೇಕಾದರೆ ಪೊಲೀಸರು ನನ್ನನ್ನು ಪಂಚರಾಗಿ ಬರಲು ಕರೆದಿರುತ್ತಾರೆ. ಚಾಸಾ-1 ನನ್ನ ಊರಿನವರು. ಪೊಲೀಸರು ಸ್ಥಳಕ್ಕೆ ಬಂದು ½ ಗಂಟೆಯ ನಂತರ

ನಾನು ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದ ½ ಗಂಟೆಯ ನಂತರ ಪಂಚನಾಮೆ ಕ್ರಮವನ್ನು ಜರುಗಿಸಿರುತ್ತಾರೆ. ಪಂಚನಾಮೆ ಕಾಲದಲ್ಲಿ 3-4 ಜನ ಇದ್ದರು. ನಾನು 8ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಚಾಸಾ-8 ರವರು ನಿಪಿ-2 ಪಂಚನಾಮೆಯನ್ನು ಬರೆದಿರುತ್ತಾರೆ. ಮುಮಾ-1 ಕಲ್ಲು ಊರಿನ ಒಳಗಿತ್ತು. ಚಾಸಾ-2 ರವರು ಕಲ್ಲನ್ನು ತಂದು ಕೊಟ್ಟಿದ್ದು ನಾನು ಅದನ್ನು ನೋಡಿರುತ್ತೇನೆ. ಆರೋಪಿತರು ಮುಮಾ-1 ಕಲ್ಲಿನಲ್ಲೇ ಚಾಸಾ-1 ರವರಿಗೆ ಹೊಡೆದಿರುತ್ತಾರೆ ಎಂದು ನನಗೆ ಯಾರೂ ಹೇಳಿರುವುದಿಲ್ಲ. ನಿಪಿ-2 ನ್ನು ನಾನು ಓದಿ ಸಹಿ ಮಾಡಿರುತ್ತೇನೆ. ನಾನು ಒಂದು ಪುಟಕ್ಕೆ ಸಹಿ ಮಾಡಿರುತ್ತೇನೆ. ಮುಮಾ-1 ರ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುವುದಿಲ್ಲ. ಚಾಸಾ-1 ರಿಂದ 4 ರವರು ನನ್ನೊಂದಿಗೆ ಬಹಳ ವಿಶ್ವಾಸದಿಂದ ಇದ್ದಾರೆ ಎಂದರೆ ಸರಿ. ನಾನು ಯಾವುದೇ ಮಹಜರಿಗೆ ಹೋಗಿರುವುದಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಕಲ್ಲನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ನನ್ನ ತೋಟದ ಕಡೆ ಹೋಗಿರುವುದಿಲ್ಲ. ಪೊಲೀಸರು ನನ್ನನ್ನು ಪಂಚನಾಮೆಗೆ ಕರೆದಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನಗೆ ಸ್ಥಳದಲ್ಲೇ ನೋಟೀಸನ್ನು ನೀಡಿರುತ್ತಾರೆ. ನಿಪಿ-2 ನ್ನು ಪೊಲೀಸ್ ಠಾಣೆಯಲ್ಲೇ ತಯಾರಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಆರೋಪಿತರ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**